ಅ) ರಾಜ್ಯದಲ್ಲಿ ಕುಟುಂಬ ಕಲ್ಯಾಣ ಕಾರ್ಯಕ್ರಮ ಯಶಸ್ವಿಯಾಗಲು ಸರ್ಕಾರ ಈ ಕೆಳಕಂಡ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ:-

1. ತಾಯಿ ಮಕ್ಕಳ ಆರೋಗ್ಯದ ಆರೈಕೆ.

2. ಗರ್ಭಿಣಿ ಸ್ತ್ರೀಯರಿಗೆ ಟಿಟನಸ್ ವಿರುದ್ಧ ಹಾಗೂ ಮಕ್ಕಳಿಗೆ ಇಂಜಕ್ಷನ್ ಬಿಸಿಜಿ ಪೋಲಿಯೋ ಔಷಧ ಇಂಜಕ್ಷನ್ ಡಿಪಿಟಿ ಹಾಗೂ ದಡಾರ ವಿರುದ್ಧ ಇಂಜಕ್ಷನ್ ನೀಡುವುದು.

3. ಪೌಷ್ಠಿಕತೆಯ ಪೂರಕವಾಗಿ ಗರ್ಭಿಣಿ ಸ್ತ್ರೀಯರಿಗೆ ಹಾಗೂ ಮಕ್ಕಳಿಗೆ ಕಬ್ಬಿಣಾಂಶದ ಮಾತ್ರೆ ಹಾಗೂ ಮಕ್ಕಳಿಗೆ ವಿಟಮಿನ್ ಎ ನೀಡುವಿಕೆ.

4. ಗರ್ಭ ನಿರೋಧಕ ತಾತ್ಕಾಲಿಕ ಹಾಗೂ ಶಾಶ್ವತ ವಿಧಾನಗಳ ಸೇವೆ ಒದಗಿಸುವುದು.

5. ಆರೋಗ್ಯ ಶಿಕ್ಷಣ ಮಾಹಿತಿ ಹಾಗೂ ಸಂಪರ್ಕದಿಂದ ಜನಸಾಮಾನ್ಯರು ಕುಟುಂಬ ಕಲ್ಯಾಣ ಕಾರ್ಯಕ್ರಮವನ್ನು ಅನುಸರಿಸುವಂತೆ ಮನ ಒಲಿಸುವುದು.

ಆ) ಇದುವರೆಗೆ ಕುಟುಂಬ ಕಲ್ಯಾಣಕ್ಕೆ ಒಳಪಟ್ಟವರ ಸಂಖ್ಯೆ 42.20 ಲಕ್ಷ ದಂಪತಿಗಳು.

ಇ) ಮೈಸೂರು ಜಿಲುವಾಂಬ ಆಸ್ಪತ್ರೆ ಮತ್ತು ಬೆಂಗಳೂರು ವಾಣಿವಿಲಾಸ ಆಸ್ಪತ್ರೆಗಳಲ್ಲದೆ ರಾಜ್ಯದಲ್ಲಿ ಮಕ್ಕಳು ಮತ್ತು ಮಹಿಳೆಯರಿಗಾಗಿ ಒಟ್ಟು 223 ಪ್ರಸೂತಿ ಗೃಹಗಳಿರುತ್ತವೆ.

ಈ) ಈಗ 561 ವೈದ್ಯರ ಹುದ್ದೆಗಳು ಖಾಲಿ ಇವೆ.

ವಿಷಯ:- ಶಿಗ್ಗಾಂವ ಆಸ್ಪತ್ರೆ ಮೇಲ್ದರ್ಜೆಗೆ ಏರಿಸುವುದು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1691 (2272)

ಶ್ರೀ ಮಂಜುನಾಥ್ ಸಿ.ಕುನ್ನೂರ (ಶಿಗ್ಗಾಂವ್):- ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ 1995-96ನೇ ಸಾಲಿನಲ್ಲಿ ಎಷ್ಟು ಸಮುದಾಯ ಆರೋಗ್ಯ ಕೇಂದ್ರಗಳನ್ನು 70 ಅಥವಾ 100 ಹಾಸಿಗೆಗಳ ಜನರಲ್ ಆಸ್ಪತ್ರೆಯನ್ನಾಗಿ ಮೇಲ್ದರ್ಜೆಗೆ ಏರಿಸಲಾಗುವುದು.

ಆ) ಶಿಗ್ಗಾಂವ್ ಸಿ.ಹೆಚ್.ಸಿ.ಯನ್ನು 100 ಹಾಸಿಗೆಗಳಿಗೆ ಮೇಲ್ದರ್ಜೆಗೆ ಏರಿಸಲು ಸರ್ಕಾರಕ್ಕೆ ಸಾರ್ವಜನಿಕರಿಂದ ಮನವಿ ಮಾಡಲಾಗಿದೆಯೇ?

ಇ) ಹಾಗಿದ್ದಲ್ಲಿ ಶಿಗ್ಗಾಂವ್ ಆಸ್ಪತ್ರೆ ಕೂಡಲೇ ಮೇಲ್ದರ್ಜೆಗೆ ಏರಿಸಲು ಕ್ರಮ ಕೈಗೊಳ್ಳುವರೇ?

ಶ್ರೀ ಹೆಚ್.ಸಿ.ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):-

ಅ) ಈ ವಿಷಯವನ್ನು ಪರಿಶೀಲಿಸಲಾಗುವುದು.

ಆ) ಹೌದು.

ಇ) ಸಮುದಾಯ ಆರೋಗ್ಯ ಕೇಂದ್ರ ಶಿಗ್ಗಾಂವ್ ಈ ಆಸ್ಪತ್ರೆಯನ್ನು 30 ಹಾಸಿಗೆಯಿಂದ 50 ಹಾಸಿಗೆಗೆ ಮೇಲ್ದರ್ಜೆಗೇರಿಸಲು ವಿಶ್ವಬ್ಯಾಂಕ್ ನೆರವಿನ ಯೋಜನೆಯಡಿಯಲ್ಲಿ ಪ್ರಸ್ತಾವನೆ ಸಲ್ಲಿಸಲಾಗಿದೆ.

ವಿಷಯ:- ದೇವನಹಳ್ಳಿ ಕ್ಷೇತ್ರದಲ್ಲಿ ಪ್ರಾಥಮಿಕ ಶಿಕ್ಷಕರ ಕೊರತೆ

ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ : 1693 (2231)

ಶ್ರೀ ಜಿ.ಚಂದ್ರಣ್ಣ (ದೇವನಹಳ್ಳಿ):- ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದೇವನಹಳ್ಳಿ ವಿಧಾನ ಸಭಾ ಕ್ಷೇತ್ರದಲ್ಲಿ ಒಟ್ಟು ಎಷ್ಟು ಪ್ರಾಥಮಿಕ ಮತ್ತು ಹಿರಿಯ ಪ್ರಾಥಮಿಕ ಶಾಲೆಗಳವೆ ಹಾಗೂ ಇವುಗಳಲ್ಲಿರುವ ಒಟ್ಟು ವಿದ್ಯಾರ್ಥಿಗಳ ಸಂಖ್ಯೆ ಎಷ್ಟು ?

ಆ) ಈ ಶಾಲೆಗಳಲ್ಲಿ ಕೆಲಸ ಮಾಡುವ ಸರಕಾರಿ ಶಿಕ್ಷಕರ ಸಂಖ್ಯೆ ಎಷ್ಟು?

ಶ್ರೀ ಹೆಚ್.ಜಿ.ಗೋವಿಂದೇಗೌಡ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):-

ಅ) 1. ಕಿರಿಯ ಪ್ರಾಥಮಿಕ ಶಾಲೆಗಳು 105

2. ಹಿರಿಯ ಪ್ರಾಥಮಿಕ ಶಾಲೆಗಳು: 75

ಇವುಗಳಲ್ಲಿರುವ ವಿದ್ಯಾರ್ಥಿಗಳ ಸಂಖ್ಯೆ 26,493

ಆ) 473

ವಿಷಯ:- ವೈದ್ಯಾಧಿಕಾರಿಗಳ ಕೊರತೆ ಕುರಿತು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1696 (2232)

ಶ್ರೀ ಜಿ. ಚಂದ್ರಣ್ಣ (ದೇವನಹಳ್ಳಿ):- ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ದೇವನಹಳ್ಳಿ ಕ್ಷೇತ್ರದಲ್ಲಿ ಇರತಕ್ಕಂತಹ ಆಸ್ಪತ್ರೆಗಳು ಎಷ್ಟು? ಯಾವ ಯಾವ ರೀತಿಯ ಆಸ್ಪತ್ರೆಗಳು ಇವೆ?

ಆ) ಅವುಗಳಲ್ಲಿ ಖಾಲಿ ಇರುವ ವೈದ್ಯರುಗಳು ಮತ್ತು ಸಿಬ್ಬಂದಿಗಳ ಸಂಖ್ಯೆ ಎಷ್ಟು?

ಇ) ಈ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರದವರು ಕೈಗೊಳ್ಳಲಿರುವ ಕ್ರಮಗಳೇನು?

ಶ್ರೀ ಹೆಚ್.ಸಿ.ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):-

ಅ) ಪ್ರಾಥಮಿಕ ಆರೋಗ್ಯ ಕೇಂದ್ರಗಳು – 9

1) ಕುಂದಾನಾ
2) ಆವತಿ
3) ನಲ್ಲೂರು
4) ಚನ್ನರಾಯಪಟ್ಟಣ
5) ಸೂಲಿಬೆಲೆ
6) ಬಾಗಲೂರು
7) ಬೆಟ್ಟಲಸೂರು
8) ಆರದೇಶನ ಹಳ್ಳಿ
9) ಕೋಯಿರಾ

ಸಮುದಾಯ ಆರೋಗ್ಯ ಕೇಂದ್ರ – 1

1) ದೇವನಹಳ್ಳಿ –